ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 22-03-2021 ಪ್ರಶ್ನೆ ಸಂಖ್ಯೆ : 1601 (1860)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 22-03-2021

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು

ವಿಷಯ : ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಕುರಿತು

(ಅ) ರಾಜ್ಯದ ಪ್ರವಾಸೋದ್ಯಮ ಇಲಾಖೆ ಅಡಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ, ಉತ್ತೇಜನಗೊಳಿಸಲು ಇರುವ ಅಂಗಸಂಸ್ಥೆಗಳು ಯಾವುವು; ಕಳೆದ 3 ವರ್ಷಗಳಲ್ಲಿ ಈ ಅಂಗಸಂಸ್ಥೆಗಳ ಕಾರ್ಯನಿರ್ವಹಣೆ, ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಅನುದಾನ ಹಾಗೂ ಅನುದಾನದಲ್ಲಿ ಸಾಧಿಸಿದ ಭೌತಿಕ-ಆರ್ಥಿಕ ಗುರಿ ಮತ್ತು ಸಾಧನೆಗಳ ವಿವರವನ್ನು ನೀಡುವುದು;

(ಆ) ಕಳೆದ 3 ವರ್ಷಗಳಲ್ಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯಿಂದ ಪ್ರಾಯೋಜಿತವಾದ Golden Chariot Train ನ ಭೌತಿಕ-ಆರ್ಥಿಕ ಗುರಿ ಮತ್ತು ಸಾಧನೆಗಳೇನು; (ವಿವರ ನೀಡುವುದು)

(ಇ) ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯವರು ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನೊಳಗೊಂಡಂತೆ, ತುಮಕೂರು ಜಿಲ್ಲೆ "ಕಲ್ಪತರು ಪ್ರವಾಸಿ ಸರ್ಕ್ಯೂಟ್" (Kalpataru Tourist Circuit) ಎಂದು ಘೋಷಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಸ್ವೀಕೃತವಾಗಿದೆಯೇ; ಹಾಗಿದ್ದಲ್ಲಿ, ಈ ಪ್ರಸ್ತಾವನೆ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ತುಮಕೂರು ಜಿಲ್ಲೆಯನ್ನು "ಕಲ್ಪತರು ಪ್ರವಾಸಿ ಸರ್ಕ್ಯೂಟ್" ಘೋಷಿಸಿದ ನಂತರ, ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಯಮಿತ (Karnataka Tourism Infrastructure Ltd.,) ವತಿಯಿಂದ ಮತ್ತು ಕೇಂದ್ರ ಸರ್ಕಾರದ ನೆರವಿನಿಂದ ಈ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರ ಮುಂದಾಗುವುದೇ? (ವಿವರ ನೀಡುವುದು)